ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಸಿಂಡಿಕೇಟ್/ಬಿ.ಓ.ಸಿ/2021-22 ದಿನಾಂಕ: 01.06.2021

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಆನ್-ಲೈನ್ ಪರಿಚಲನೆಯ ನಡಾವಳಿಗಳು.**

ವಿಷಯ: 2020-21ನೇಸಾಲಿನ ಸಂಯೋಜನಾ ನವೀಕರಣ/ಹೊಸಕೋರ್ಸಿನ ಸಂಯೋಜನೆ/ಶಾಶ್ವತ ಸಂಯೋಜನಾ ನವೀಕರಣ/ ಹೊಸ ಶಾಶ್ವತ ಸಂಯೋಜನೆ/ವಿದ್ಯಾರ್ಥಿ ಪ್ರಮಾಣ ಹೆಚ್ಚಳಕ್ಕೆ ಸಂಬಂಧಿಸಿದಂತೆ ನೇಮಿಸಿದ್ದ ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರು ಸಲ್ಲಿಸಿರುವ ವರದಿಗಳನ್ನು ಪರಿಗಣಿಸುವ ಬಗ್ಗೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21 ನೇ ಸಾಲಿನ ಸಂಯೋಜನೆಗಾಗಿ 13 ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲಾಗಿ ದಿನಾಂಕ 23.02.2021 ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಹಾಗೂ ದಿನಾಂಕ 26.02.2021 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ 12 ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರು ಸಲ್ಲಿಸಿದ್ದ ವರದಿಗಳನ್ನು ಮಂಡಿಸಲಾಗಿ ಸಭೆಯ ಅನುಮೋದನೆಯಂತೆ ಕ್ರಮ ಜರಗಿಸಲಾಗಿದೆ ಹಾಗೂ ನವೀಕರಣದ ಆದೇಶಗಳನ್ನು ಹೊರಡಿಸಲಾಗಿದೆ.

ಸರ್ಕಾರ ಹೊಸದಾಗಿ ಸಂಯೋಜನೆಗೆ ಸಂಬಂಧಿಸಿದಂತೆ ತಂತ್ರಾಂಶ (software) ನ್ನು ಅಭಿವೃದ್ಧಿಗೊಳಿಸಿ ಆನ್ ಲೈನ್ ಮುಖಾಂತರ ಸ್ಥಳೀಯ ವಿಚರಣಾ ಸಮಿತಿಯ ವರದಿಗಳನ್ನು ನೇರವಾಗಿ ಸಲ್ಲಿಸುವ ತಂತ್ರಜ್ಞಾನ ಆಧಾರಿತ ಪ್ರಕ್ರಿಯೆಯನ್ನು ಅನುಷ್ಠಾನಕ್ಕೆ ತಂದಿದ್ದು, ತಂತ್ರಾಂಶದ ಕೆಲವು ತಾಂತ್ರಿಕ ತೊಂದರೆಗಳಿಂದ ದಿನಾಂಕ 23.02.2021 ರಂದು ವಿದ್ಯಾವಿಷಯಕ ಪರಿಷತ್ತಿನ ಸಭೆ ಮತ್ತು ದಿನಾಂಕ 26.02.2021 ರಂದು ನಡೆಸಲಾದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದ್ದ ವರದಿಗಳಲ್ಲಿ ಕೆಲವು ಕಾಲೇಜುಗಳ ತಂತ್ರಾಂಶ ನಿಗದಿತ ಅರ್ಹತಾ Score (ಅಂಕಗಳು) ಬರದೆ ಇದ್ದುದರಿಂದ ಅಂತಹ ವರದಿಗಳನ್ನು ಸಮಿತಿಯ ಅಧ್ಯಕ್ಷರುಗಳು ಸಲ್ಲಿಸಿರುವುದಿಲ್ಲ.

ಉಳಿದಂತೆ ಡಾ. ವಿ.ಆರ್ ದೇವರಾಜ್ ರವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸ್ಥಳೀಯ ವಿಚಾರಣಾ ಸಮಿತಿಗೆ ಒಂದು ಹೊಸ ಕಾಲೇಜಿನ ಸಂಯೋಜನೆ ಸೇರಿದಂತೆ ಒಟ್ಟು 16 ಕಾಲೇಜುಗಳ ವರದಿಗಳನ್ನು, ಶ್ರೀ ಥಾಮಸ್ ನೀಲಿಯಾರ ರವರ ಸಮಿತಿಯ 5 ವರದಿಗಳು, ಡಾ. ಎಂ. ಪಾಂಡುರಂಗಪ್ಪ ರವರ ಸಮಿತಿಯ 2 ವರದಿಗಳು, ಡಾ. ಪದ್ಮಜಾ ರವರ ಸಮಿತಿಯ 1 ವರದಿ ಮತ್ತು ಪ್ರೊ. ಚಿಕ್ಕಮುನಿಯಪ್ಪ ರವರ ಸಮಿತಿಯ 1 ವರದಿ ತಾಂತ್ರಿಕ ಕಾರಣಗಳಿಂದಾಗಿ ನಿಗದಿತ ಅವಧಿಯೊಳಗೆ ಸಲ್ಲಿಸಲಾಗಿರದಿದ್ದ ವರದಿಗಳನ್ನು ಈಗ ಸಲ್ಲಿಸಿದ್ದಾರೆ. ಸದರಿ ಸಂಯೋಜನಾ ಸಮಿತಿಗಳ ವರದಿಗಳನ್ನು ಕೋವಿಡ್ ಲಾಕ್ ಡೌನ್ ನಿಯಾಮಾವಳಿಗಳ ಪ್ರಕಾರ ವಿದ್ಯಾವಿಷಯಕ ಪರಿಷತ್ತಿನ ಸಭೆಯನ್ನು ಆಯೋಜಿಸಲು ಸಾಧ್ಯವಿಲ್ಲದ ಕಾರಣದಿಂದ ಆನ್-ಲೈನ್ ಪರಿಚಲನೆಯ ಮುಖಾಂತರ (By circulation online) ಅನುಮೋದನೆ ಕೋರಿ ಇ-ಮೇಲ್ ಮುಖಾಂತರ ದಿನಾಂಕ 4.05.2021 ರಂದು ಎಲ್ಲಾ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರ ಅನುಮೋದನೆಯನ್ನು ದಿನಾಂಕ 9.05.2021 ಒಳಗಾಗಿ ತಿಳಿಸಬೇಕೆಂದು ಕೋರಿ, ಸದರಿ ದಿನಾಂಕದ ಒಳಗೆ ಯಾವುದೇ ಸದಸ್ಯರ ಅನುಮೋದನೆ ಬಾರದಿದ್ದಲ್ಲಿ ಸದರಿ ವಿಷಯಕ್ಕೆ ಅವರ ಅನುಮೋದನೆ ಇದೆ ಎಂದು ಭಾವಿಸಲಾಗುವುದೆಂದು ತಿಳಿಸಲಾಗಿತ್ತು.

ಕೆ ಎಸ್ ಯು ಕಾಯ್ದೆ 2000 ಸೆಕ್ಷನ್ 59(8)ರ ಅನ್ವಯ The Academic council shall soon after the receipt of the report of the Local enquiry committee consider the findings of the committee envisaged in the report and make such further inquiry as may appear to it to be necessary and record its opinion on such report and transmit it to the Syndicate.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾವಿಷಯಕ ಪರಿಷತ್ತಿನ 23 ಸದಸ್ಯರುಗಳು ಇ–ಮೇಲ್ ಮುಖಾಂತರ ಅನುಮೋದನೆಯನ್ನು ನೀಡಿರುವುದರಿಂದ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020–21 ನೇ ಸಾಲಿನ ಸಂಯೋಜನೆಗಾಗಿ ರಚಿಸಿದ್ದ ಡಾ. ವಿ.ಆರ್ ದೇವರಾಜ್ ರವರ ಅಧ್ಯಕ್ಷತೆಯಲ್ಲಿ ಸಲ್ಲಿಸಿದ್ದ 16 ಕಾಲೇಜುಗಳ ವರದಿಗಳನ್ನು, ಶ್ರೀ ಥಾಮಸ್ ನೀಲಿಯಾರ ರವರ ಸಮಿತಿಯ 5 ವರದಿಗಳನ್ನು, ಡಾ. ಎಂ. ಪಾಂಡುರಂಗಪ್ಪ ರವರ ಸಮಿತಿಯ 2 ವರದಿಗಳನ್ನು, ಡಾ. ಪದ್ಮಜಾ ರವರ ಸಮಿತಿಯ 1 ವರದಿಯನ್ನು ಮತ್ತು ಪ್ರೊ. ಚಿಕ್ಕಮುನಿಯಪ್ಪ ರವರ ಸಮಿತಿಯ 1 ವರದಿಯನ್ನು ಮುಂದಿನ ಪ್ರಕ್ರಿಯೆಗಾಗಿ ಅನುಮೋದಿಸಲಾಗಿದೆ ಎಂದು ವಿದ್ಯಾವಿಷಯಕ ಪರಿಷತ್ತಿನ ಸಭೆಯು ನಿರ್ಣಯವನ್ನು ಮಾಡಿದೆ.

ದಿನಾಂಕ 6.05.2021 ರಂದು ಆನ್–ಲೈನ್ ಪರಿಚಲನೆಯ ಮುಖಾಂತರ (By circulation online) ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ಕಾರ್ಯಸೂಚಿಯನ್ನು ಕಳುಹಿಸಿ ಅನುಮೋದನೆಯಾಗಿರುವ ವಿದ್ಯಾವಿಷಯಕ ಪರಿಷತ್ತಿನ ನಡಾವಳಿಗಳು ತಲುಪಿತದ ಮೂರು ದಿನಗಳೊಳಗಾಗಿ ಕಾರ್ಯಸೂಚಿಯಲ್ಲಿ ನಮೂದಿಸಿರುವ ಪ್ರತಿ ವಿಷಯಕ್ಕೆ ಅವರ ಅನುಮೋದನೆಯನ್ನು ಇ–ಮೇಲ್ ಮುಖಾಂತರ ತಿಳಿಸಬೇಕೆಂದು ಕೋರಲಾಗಿತ್ತು.

ದಿನಾಂಕ 13.05.2021 ರಂದು ವಿದ್ಯಾವಿಷಯಕ ಪರಿಷತ್ತಿನ ಪರಿಚಲನೆಯ ಸಭೆಯ ನಡಾವಳಿಗಳನ್ನು ಸದಸ್ಯರುಗಳಿಗೆ ಕಳುಹಿಸಿ ದಿನಾಂಕ 17.05.2021 ರ ಒಳಗೆ ಅವರ ಅನುಮೋದನೆಯನ್ನು / ಅಭಿಪ್ರಾಯವನ್ನು ಕಳುಹಿಸಿಕೊಡಲು ಕೋರಲಾಗಿತ್ತು.

ಕೆ ಎಸ್ ಯು ಕಾಯ್ದೆ 2000 ಸೆಕ್ಷನ್ 59(9)ರ ಅನ್ವಯ The Syndicate shall consider the report of the committee and the resolution of the Academic Council and shall further record its opinion on the question whether the request shall be granted either in whole or in part or rejected, after making such further enquiry as may be deemed necessary.

ಮಾನ್ಯ ಸದಸ್ಯರುಗಳಿಂದ ಸದರಿ ವಿಷಯಕ್ಕೆ ಅನುಮೋದನೆಗಳನ್ನು ಸ್ವೀಕರಿಸಲಾಗಿದ್ದು, ಈ ಕೆಳಕಂಡಂತೆ ಇವೆ.

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್‌ನ 10 ಸದಸ್ಯರುಗಳು ಇ–ಮೇಲ್ ಮುಖಾಂತರ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020–21 ನೇ ಸಾಲಿನ ಸಂಯೋಜನೆಗಾಗಿ ರಚಿಸಿದ್ದ ಡಾ. ವಿ.ಆರ್ ದೇವರಾಜ್ ರವರ ಅಧ್ಯಕ್ಷತೆಯಲ್ಲಿ ಸಲ್ಲಿಸಿದ್ದ 15 ಕಾಲೇಜುಗಳ ವರದಿಗಳನ್ನು, ಶ್ರೀ ಥಾಮಸ್ ನೀಲಿಯಾರ ರವರ ಸಮಿತಿಯ 5 ವರದಿಗಳನ್ನು, ಡಾ. ಎಂ. ಪಾಂಡುರಂಗಪ್ಪ ರವರ ಸಮಿತಿಯ 2 ವರದಿಗಳನ್ನು, ಡಾ. ಪದ್ಮಜಾ ರವರ ಸಮಿತಿಯ 1 ವರದಿಯನ್ನು ಮತ್ತು ಪ್ರೊ. ಚಿಕ್ಕಮುನಿಯಪ್ಪ ರವರ ಸಮಿತಿಯ 1 ವರದಿಯನ್ನು (ಕಾರ್ಯಸೂಚಿಯಲ್ಲಿ ಕಳುಹಿಸಿದ್ದಂತೆ) ಅವರುಗಳು ಅನುಮೋದನೆಯನ್ನು ಸೂಚಿಸಿರುತ್ತಾರೆ.

ಮೇವಾ ಡಿಗ್ರಿ ಕಾಲೇಜಿನ ಎಂ.ಬಿ.ಎ ಕೋರ್ಸಿನ ಹೊಸ ಸಂಯೋಜನೆ ಕುರಿತಂತೆ ಮಾನ್ಯ ಸದಸ್ಯರುಗಳು ಚರ್ಚೆಗೆ ತರಬೇಕೆಂದು ಬಯಸಿರುತ್ತಾರೆ.

ಶ್ರೀಮತಿ ಜ್ಯೋತಿ ವಿಜಯ್ ಸದಸ್ಯರು ದಿನಾಂಕ 13.05.2021 ರ ಇ–ಮೇಲ್ ಮುಖಾಂತರ ಕೆಲವು ಮಾಹಿತಿಗಳನ್ನು ಒದಗಿಸಲು ಕೋರಿದ್ದರು. ದಿನಾಂಕ 25.05.2021 ರಂದು ಅವರಿಗೆ ಇ–ಮೇಲ್ ಮುಖಾಂತರ ಮಾಹಿತಿಗಳನ್ನು ಒದಗಿಸಲಾಗಿದೆ.

ದಿನಾಂಕ 26.05.2021 ರಂದು ಶ್ರೀಮತಿ ಜ್ಯೋತಿ ವಿಜಯ್ ರವರು ಮತ್ತೊಂದು ಇ–ಮೇಲ್ ಮುಖಾಂತರ ಅವರ ಆಕ್ಷೇಪಣೆಗಳನ್ನು ತಿಳಿಸಿ ಅಸಮ್ಮತಿಯನ್ನು (Dissent) ಸೂಚಿಸಿದ್ದಾರೆ.

**ಸಿಂಡಿಕೇಟ್ ಸಭೆ ನಿರ್ಣಯ**

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್‌ನ 10 ಸದಸ್ಯರುಗಳು ಇ-ಮೇಲ್ ಮುಖಾಂತರ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21 ನೇ ಸಾಲಿನ ಸಂಯೋಜನೆಗಾಗಿ ರಚಿಸಿದ್ದ ಡಾ. ವಿ.ಆರ್ ದೇವರಾಜ್ ರವರ ಅಧ್ಯಕ್ಷತೆಯಲ್ಲಿ ಸಲ್ಲಿಸಿದ್ದ 15 ಕಾಲೇಜುಗಳ ವರದಿಗಳನ್ನು, ಶ್ರೀ ಥಾಮಸ್ ನೀಲಿಯಾರ ರವರ ಸಮಿತಿಯ 5 ವರದಿಗಳನ್ನು, ಡಾ. ಎಂ. ಪಾಂಡುರಂಗಪ್ಪ ರವರ ಸಮಿತಿಯ 2 ವರದಿಗಳನ್ನು, ಡಾ. ಪದ್ಮಜಾ ರವರ ಸಮಿತಿಯ 1 ವರದಿಯನ್ನು ಮತ್ತು ಪ್ರೊ. ಚಿಕ್ಕಮುನಿಯಪ್ಪ ರವರ ಸಮಿತಿಯ 1 ವರದಿಯನ್ನು (ಕಾರ್ಯಸೂಚಿಯಲ್ಲಿ ಕಳುಹಿಸಿದ್ದಂತೆ) ಶೈಕ್ಷಣಿಕ ಹಿತದೃಷ್ಟಿಯಿಂದ ಅನುಮೋದಿಸಲಾಗಿದೆ.

ಮೇವಾ ಡಿಗ್ರಿ ಕಾಲೇಜಿನ ಎಂ.ಬಿ.ಎ ಕೋರ್ಸಿನ ಹೊಸ ಸಂಯೋಜನೆ ಕುರಿತಂತೆ ಮಾನ್ಯ ಸದಸ್ಯರುಗಳು ಚರ್ಚೆಗೆ ತರಬೇಕೆಂದು ಬಯಸಿರುವುದರಿಂದ ಈ ವಿಷಯವನ್ನು ಪ್ರತ್ಯೇಕವಾಗಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಕ್ರಮವಹಿಸಲಾಗುವುದು ಎಂದು ನಿರ್ಣಯಿಸಲಾಗಿದೆ.

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು